

# ತೆಂಕಣ ಬೆಳಕು

## ಭುವನದ ಭಾಗ್ಯ

**ಆಗಸದೆದೆಯಲ್ಲಿ ಬಣ್ಣಗಳ ಬೆಡಗಿನ ದರ್ಶನ ಮಾಡಿಸುವ ಅಪರೂಪದ ಪ್ರಾಕೃತಿಕ ವಿದ್ಯಮಾನ 'ನಾರ್ದರ್ನ್ ಲೈಟ್ಸ್'. ಬಣ್ಣದ ಕುಂಚವು ಬಾನಿನ ಕಪ್ಪು ಪರದೆಯ ಮೇಲೆ ಲೀಲಾಜಾಲವಾಗಿ ಓಡಾಡಿದಂತೆ ಆಗೊಮ್ಮೆ ಈಗೊಮ್ಮೆ ಬೆಳಕಿನಾಟ ತೋರಿಸುವ ಚಮತ್ಕಾರ ಸೃಷ್ಟಿಯ ವಿಸ್ಮಯ.**

■ ಎಸ್.ಪಿ. ವಿಜಯಲಕ್ಷ್ಮಿ

'ಅರೋರ ಬೋರಿಯಾಲಿಸ್' ಎನ್ನುವುದು ಅಪರೂಪದ ಪ್ರಾಕೃತಿಕ ವಿದ್ಯಮಾನ; ಇದನ್ನು ಕಾಣಲು 'ಅರೋರಲ್ ಝೋನ್' ಎಂದು ಕರೆಸಿಕೊಳ್ಳುವ, ಸುಮಾರು 2500 ಕಿ.ಮೀ. ರೇಡಿಯಸ್‌ನಲ್ಲಿ ಹರಡಿರುವ ಉತ್ತರ ಧ್ರುವಕ್ಕೆ ಸಮೀಪದ ಕೆಲವೇ ತಾಣಗಳಿಗೆ ಹೋಗಬೇಕು. ನಾರ್ವೆ, ಅಲಾಸ್ಕಾ, ಐಸ್‌ಲ್ಯಾಂಡ್, ಆರ್ಕ್ಟಿಕ್ ಸರ್ಕಲ್, ಗ್ರೀನ್‌ಲ್ಯಾಂಡ್, ಇತ್ಯಾದಿ.

ಈಗ ಕೆಲವು ದಿನಗಳಿಂದ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಈ ವಿಸ್ಮಯ ಸೃಷ್ಟಿ ಚಮತ್ಕಾರ ಅತ್ಯಪರೂಪದ್ದು, ವಿಶೇಷದ್ದು. ಇದು ಸಂಭವಿಸಲು ಕಾರಣ, ಪ್ರಕೃತಿಯಲ್ಲಾದ ಹಠಾತ್ ಬದಲಾವಣೆ. ಹೌದು, ಭೂಮಿಯ ಆಯಸ್ಕಾಂತೀಯ ಶಕ್ತಿ ದ್ವಿಗುಣಗೊಂಡು, ಪ್ರಬಲವಾದ ಸೌರ ಚಂಡಮಾರುತವು ಭೂಮಿಗೆ ಅಪ್ಪಳಿಸಿದ ಪರಿಣಾಮ ಆಗಸದಲ್ಲಿ ಬಣ್ಣಗಳ ಬೆಡಗಿನ ನರ್ತನ ಭೂಮಿಗೆ ಸ್ವರ್ಗ ಇಳಿಸಿಬಿಟ್ಟಿತು.

'ಅರೋರ ಬೋರಿಯಾಲಿಸ್' ಎಲ್ಲೆಂದರಲ್ಲಿ ಕಾಣಸಿಗದ ವಿದ್ಯಮಾನ. ಸೆಪ್ಟೆಂಬರ್‌ನಿಂದ ಮಾರ್ಚ್ ಅಥವಾ ಏಪ್ರಿಲ್ ಇದರ ಸಂಭವನೀಯ ಕಾಲ. ನಾನು ಅಲಾಸ್ಕಾದ ಕೆಚಿಕನ್ ಎಂಬ ಹಳ್ಳಿಗೆ ಹೋದಾಗ, ಒಂದು ರಾತ್ರಿ ಬಹಳ ಮಿಂಚಿನಂತೆ ಸುಳಿದು ಮಾಯವಾದ ಈ ಅದ್ಭುತ ಬೆಡಗನ್ನು ಕಂಡಿದ್ದೆ. ಅದೇನೆಂದು ಅರ್ಥೈಸಿಕೊಳ್ಳುವಷ್ಟರಲ್ಲಿ ಮಾಯವಾಗಿತ್ತು. ಆ ಅನುಭವ ಮಾತ್ರ ಅನನ್ಯ.

'ನಾರ್ದರ್ನ್ ಲೈಟ್ಸ್' ಅಥವಾ 'ಅರೋರ ಬೋರಿಯಾಲಿಸ್' ಚಮತ್ಕಾರವನ್ನು ಕನ್ನಡದಲ್ಲಿ 'ತೆಂಕಣ ಬೆಳಕು' ಎನ್ನಬಹುದು. ಭೂಮಿಯ ಉತ್ತರಧ್ರುವಕ್ಕೆ ಆಯಸ್ಕಾಂತೀಯ ಗುಣವಿದೆ. ಈ ಆಯಸ್ಕಾಂತೀಯ ಗುಣ, ವಾತಾವರಣದಲ್ಲಿರುವ ಸೌರ ವಿದ್ಯುತ್ ಬಿಡುಗಡೆ ಮಾಡುವ ಕಣಗಳನ್ನು (ಎಲೆಕ್ಟ್ರಾನ್ಸ್) ಭೂಮಿಯೆಡೆ ಸೆಳೆದಾಗ, ಭೂಮಿಯ ಮೇಲಣ ಅನಿಲದ ಜೊತೆ ಆ ಕಣಗಳು ಸಂಯೋಗ ಅಥವಾ ಘರ್ಷಣೆಯಾಗಿ ಭೂ ಮಾರ್ಗದಿಂದ ಮೇಲೆ ಆಕಾಶದೆದೆಯಲ್ಲಿ 'ಪ್ಲಾಸ್ಮಾ' ಎಂಬ ಮೋಡಗಳು ಸೃಷ್ಟಿಯಾಗುತ್ತವೆ. ಹೀಗೆ ಅಗಾಧ ಸಂಖ್ಯೆಯ ವಿದ್ಯುತ್ ಕಣಗಳು ಮತ್ತು ಅನಿಲದ ಘರ್ಷಣೆಯಿಂದ ಉತ್ಪತ್ತಿಯಾದ ಶಕ್ತಿ ಬೆಳಕಿನ ರೂಪದಲ್ಲಿ ಹೊರಹೊಮ್ಮುತ್ತದೆ. ಅದೂ ಎಂತಹ ಬೆಳಕು? ಕೆಂಪು, ಹಸಿರು, ನೀಲ, ನೇರಳೆ, ಗುಲಾಬಿಯ ವರ್ಣಮಯ ಬೆಳಕು ರಿಬ್ಬನ್‌ಗಳೋಪಾದಿಯಲ್ಲಿ, ದೇವಕನ್ನಿಕೆಯರ ನಯವಾದ ಪತ್ತಲಗಳ ಹಾರಾಟದ ರೂಪದಲ್ಲಿ ಚಿಮ್ಮಿ, ಆಕಾಶದ ತುಂಬಾ ಮಿನುಗುಟ್ಟುತ್ತಾ ಅಪರೂಪದ ಬೆಳಕಿನ ಹಬ್ಬವನ್ನೇ ಉಂಟುಮಾಡುತ್ತವೆ. ಇದೇ 'ಅರೋರ ಬೋರಿಯಾಲಿಸ್'.

'ಅರೋರಾ' ಅಂದರೆ, ಸೂರ್ಯ ಉದಯವಾಗುತ್ತಿದ್ದಾನೇನೋ ಎನ್ನುವ ಭ್ರಮೆ ಹುಟ್ಟಿಸುವ ಬೆಳಕು. ಬಣ್ಣದ ಕುಂಚವು ಆಗಸದ ಕಪ್ಪು ಪರದೆಯ ಮೇಲೆ ಲೀಲಾಜಾಲವಾಗಿ ಓಡಾಡಿದಂತೆ ಆಗೊಮ್ಮೆ ಈಗೊಮ್ಮೆ ಬೆಳಕಿನಾಟ ತೋರಿಸುವ ಚಮತ್ಕಾರ. ವರ್ಣಗಳ ನೃತ್ಯ ನಿಜವಾಗಿ ಸೃಷ್ಟಿಯ ಅತ್ಯದ್ಭುತ, ಭುವನದ ಭಾಗ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ. ದೇವಲೋಕದ ಬೆಳಕೇ ಇಳಿದುಬಂದಂತೆ ಮಂತ್ರಮುಗ್ಧವಾಗಿಸುವ ಈ ಮಾಯೆಯಲ್ಲಿ ಭೂಮಿಯ ಮೇಲೆ ನಿಂತವರು ಮೈಮರೆಯುವಂತಾಗುತ್ತದೆ. ಯಾವ ಅನಿಲದ ಜೊತೆ ಹೆಚ್ಚು ಘರ್ಷಣೆಯಾಗುವುದೋ ಆ ಅನಿಲದ ಬಣ್ಣ ಈ ಚಮತ್ಕಾರದಲ್ಲಿ ಪ್ರಧಾನವಾಗಿದೆ ಎಂದರ್ಥ. ಉದಾಹರಣೆಗೆ, ಆಕ್ಸಿಜನ್ ಹೆಚ್ಚಿದ್ದರೆ ಹಸಿರು ಬಣ್ಣದ ಬೆಳಕೇ ಹೆಚ್ಚು ಮೂಡುವುದು.

ಆಗಸದ ರಂಗಮಂಚದಲ್ಲಿ 'ಅರೋರ ಬೋರಿಯಾಲಿಸ್' ನರ್ತಿಸುವ ಸಮಯವಾದರೂ ಎಂಥದ್ದು, ಅದು ಕಗ್ಗತ್ತಲ ಇರುಳು. ಅದೂ ರಾತ್ರಿಯ 8 ಗಂಟೆಯಿಂದ ನಡುರಾತ್ರಿ 11.30ರವರೆಗೂ. ಗಗನಚುಂಬಿ ಕಟ್ಟಡಗಳ ಅಡೆತಡೆ ಇಲ್ಲದೆ ಹೋದರೆ ಈ ವರ್ಣ ವಿಸ್ಮಯವನ್ನು ನಗರಗಳಲ್ಲಿಯೂ ಕಾಣಬಹುದು. ಆದರೆ, ಕೃತಕ ವಿದ್ಯುದ್ದೀಪಗಳ ಬೆಳಕೇ ಹೆಚ್ಚಿದ್ದರೆ, ಥಕ್ಕನೆ ಅರೋರಾವನ್ನು ಗುರುತಿಸಲಾಗುವುದಿಲ್ಲ. ಹೆಚ್ಚುಕಮ್ಮಿ ತೆರೆದ ಬಯಲು, ಸುತ್ತ ನಿಂತ ಹಿಮವತ್ಪರ್ವತ ಸಾಲು, ಹಸಿರಿನ ಕಾಡು– ನಿಸರ್ಗದ ಸನ್ನಿಧಿಯಲ್ಲಿ ಈ ರಂಗಿನ ಬೆಳಕಿನ ದೈವೀಕ ನೃತ್ಯ ಅದ್ವಿತೀಯವಾಗಿ ಮೂಡಿಬರುತ್ತದೆ.

